ಹಾಡ್ಯ ಬ. ಜಯಾನಂದ, ಮೈಸೂರು

*ವರಮಹಾಲಕ್ಷ್ಮಿ ಲೂಟಿಕೋರರ ಮನೆಗಳಿಗೇ ಹೋಗುವುದೇಕೆ? ಸ್ಲಂನಲ್ಲಿರುವ ಮನೆಗಳು ಕಾಣಿಸುವುದಿಲ್ಲವೆ?*



ವಾಹನದ ತಪ್ಪು; ಲಕ್ಷ್ಮಿಯ ವಾಹನವಾದ ಗೂಬೆ ತನ್ನ ಬಂಧುಗಳ ಮನೆಯತ್ತಲೇ ದೇವಿಯನ್ನು ಸೆಳೆದೊಯ್ಯುವುದಂತೆ!

ಬಿ.ಎನ್. ಸೊಲ್ಲಾಪುರ, ಬೀದರ್

*ನಮ್ಮ ಸರ್ಕಾರಗಳಿಗೆ ಚುನಾವಣೆ ಕೆಲಸ ಬಿಟ್ಟು ಬೇರೆ ಏನೂ ಕಾಣಿಸುತ್ತಿಲ್ಲವಲ್ಲ, ಏಕೆ ಹೀಗೆ?*

ಬೇಟೆ ಕಾಣುತ್ತಿರುವಾಗ ಅತ್ತಲೇ ದೃಷ್ಟಿ ಹರಿಸುವುದು ತೋಳಗಳ ಸಹಜ ಗುಣ.

ರವೀಂದ್ರನಾಥ ಶಿ ಯಡಹಳ್ಳಿ, ಬೀಳಗಿ

*ಬಣ್ಣದ ನಂಟು, ಭಾವ ನೂರೆಂಟು; ರಾಜಕೀಯದ ನಂಟು...?*

ಅಭಾವ ಸಾವಿರದೆಂಟು.

ವಿ. ಹೇಮಂತಕುಮಾರ್, ಬೆಂಗಳೂರು

*ವಾಹನ ನಡೆಸಲು ಲೈಸೆನ್ಸ್ ಬೇಕು. ಪ್ರೀತಿ ಮಾಡಲು?*



ಲೈ (ಎಷ್ಟು ಸುಳ್ಳು ಹೇಳಬೇಕೆಂಬ) ಸೆನ್ಸ್ ಬೇಕು.

ರವಿ ಎಂ. ಪೈ, ಹೊನ್ನಾವರ

*ಎಕ್ಸ್‌ಪೆರಿಮೆಂಟ್‌ಗೂ, ಎಕ್ಸ್‌ಪೀರಿಯೆನ್ಸ್‌ಗೂ ಏನು ವ್ಯತ್ಯಾಸ?*

ತುಡಿತದಿಂದ ಎಕ್ಸ್‌ಪೆರಿಮೆಂಟ್, ದುಡಿತದಿಂದ ಎಕ್ಸ್‌ಪೀರಿಯೆನ್ಸ್.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಪರೀಕ್ಷೆಗೆ ಕೂರು, ಚುನಾವಣೆಗೆ ನಿಲ್ಲು ಎನ್ನುವುದೇಕೆ?*

ಪ್ರಶ್ನೆಪತ್ರಿಕೆ ನೋಡಿದಾಗ ತಲೆ ಸುತ್ತುಬಹುದಾದ್ದರಿಂದ ಕೂರಬೇಕು; ಚುನಾವಣಾ ಕಣಕ್ಕೆ ಧುಮುಕಲು ನಿಲ್ಲಬೇಕು.

ಪವನಕುವರ ಎಂ.ಆರ್.ಬಳ್ಳಾರಿ

*ರಾಮನಿಗೂ, ಕಾಮನಿಗೂ ಏನು ವ್ಯತ್ಯಾಸ?*

ರಾಮಬಾಣದಿಂದ ವೈರಿ ವಿನಾಶ; ಕಾಮಬಾಣದಿಂದ ಸ್ವೈರ ವಿಲಾಸ.

ಬೂಕನಕೆರೆ ವಿಜೇಂದ್ರ, ಮೈಸೂರು

*ಕೆಲವರು ಕಳ್ಳತನ ಮಾಡಿದರೂ ಸಿಕ್ಕಿಹಾಕಿಕೊಳ್ಳುವುದಿಲ್ಲವಲ್ಲಾ...?*

ಅದು ಅವರ ಹೆಗ್ಗಳಿಕೆಯಲ್ಲ; ಹಿಡಿಯುವವರ ದಡ್ಡತನ, 'ದುಡ್ಡು'ತನದ ಪ್ರಭಾವ.

ಅಮರಯ್ಯಾ ಪತ್ರಿಮಠ, ಸುರಪೂರ

*ಇತ್ತೀಚೆಗೆ ಗಂಡನ್ ಮನೆಗೆ ಹೋಗೋ ಮದುಮಗ್ಳಲ್ಲಿ ಕಣ್ಣೀರು ಕಾಣ್ತಾ ಇಲ್ವಲ್ಲಾ...?*

ಪಾಪ! ಡೈಲಿ ಸೀರಿಯಲ್ ನೋಡುವಷ್ಟರಲ್ಲೇ ಕಣ್ಣೀರಿನ ಸ್ಟಾಕ್ ಮುಗಿದುಹೋಗಿರತ್ತಂತೆ.

ಪ್ರಶಾಂತ್ ಮಯ್ಯ, ಸಾಗರ

*ನೀವೇನಾದರೂ ಮುಖ್ಯಮಂತ್ರಿ ಆಗಿದ್ದರೆ...?*

ಅಗತ್ಯ ಸವಲತ್ತುಗಳನ್ನಿತ್ತು, ಭಾಗ್ಯಕ್ಕೆ ಕೈಯೊಡ್ಡದೆ ಬೇಸಾಯಕ್ಕೆ ಮೈಯೊಡ್ಡಿ ಎನ್ನುತ್ತಿದ್ದೆ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

*ಕುಡುಕನಿಗೆ ಬಾರ್; ಸನ್ಯಾಸಿಗೆ ಆಶ್ರಮ; ಪ್ರಾಯಕ್ಕೆ ಬಂದ ಹುಡುಗಿಗೆ?*

ಇವೆರಡು ಜಾಗಗಳಿಗೂ ಪ್ರವೇಶ ಬಾರ್ (ನಿಷೇಧ).

ಪ್ರದೀಪ್ ಚಿತ್ರಗಾರ, ಜಾಲಿಹಾಳ

*ಕೆಲವರು ನಮ್ಮೊಂದಿಗಿದ್ದೇ ನಮಗೆ ಬಲೆ ಹೆಣೆಯುತ್ತಾರಲ್ಲಾ, ಅವರಿಗೆ/ನಮಗೆ ನಿಮ್ಮ ಸಂದೇಶವೇನು?*

ಬಲೆ ಹೆಣೆಯುವುದು ಜೇಡದ ಸಹಜ ಗುಣ; ಸಿಕ್ಕಿಬೀಳುವ ಕೀಟ ಎಚ್ಚರದಿಂದಿರಬೇಕಷ್ಟೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಕೈ ಕುಟುಂಬದ ಎಳೆಗರು ಎತ್ತಾಗುವುದೇ ಇಲ್ಲವೇ ಹೇ ರಾಂ?*

ಊಹೂಂ. ಅದಕ್ಕೆ ಎತ್ತಾಗಬೇಕೆಂದು ಗೊತ್ತಾಗುವುದೇ ಇಲ್ಲವಂತೆ!

## ಬಹುಮಾನಿತ ಪ್ರಶ್ನೆ

ಎಂ.ಎ. ಕುಮಾರ್, ಬೆಂಗಳೂರು

*ಓದಿದ್ದನ್ನು ಬರೆಯುವುದಕ್ಕೂ, ಬರೆದದ್ದನ್ನು ಓದುವುದಕ್ಕೂ ಏನು ವ್ಯತ್ಯಾಸ?*

ಓದಿದ್ದನ್ನು ಯಾವ ಡಾಕ್ಟರಾದರೂ ಬರೆಯಬಲ್ಲ; ಹಾಗೆ ಬರೆದದ್ದನ್ನು ಕೇವಲ ಮೆಡಿಕಲ್ ಸ್ಟೋರ್‌ನವನು ಮಾತ್ರ ಓದಬಲ್ಲ.

ಮುಕುಂದ ಹೆರಕಲ್ಲ, ಕಲಬುರ್ಗಿ

*ಅಂತ್ಯ ಸಂಸ್ಕಾರದಲ್ಲಿ ಹೆಣ್ಣುಮಕ್ಕಳು ಏಕೆ ಹೆಗಲು ಕೊಡುವುದಿಲ್ಲ?*

ಅಂತ್ಯದವರೆಗೆ ಅನುದಿನದ ಸೇವೆಯಲ್ಲಿ ಕೊಟ್ಟಿರುತ್ತಾರಲ್ಲಾ, ಕಡೆಯಲ್ಲಾದರೂ ಗಂಡುಮಕ್ಕಳು ಕೊಡಲೆಂದು.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*ಚುಚ್ಚುವುದು ಮುಳ್ಳಿನ ಸಹಜ ಗುಣವೆಂಬ ಕಾರಣಕ್ಕೆ ನಿರಂತರ ಚುಚ್ಚುತ್ತಲೇ ಇರಬೇಕಾ ಸಾರ್?*



ಪರಿಹಾರ ನಿಮ್ಮಲ್ಲೇ ಇದೆಯಲ್ಲ; ಮುಳ್ಳನ್ನು ಮೆಟ್ಟುವುದು ಮೆಟ್ಟಿನ ಗುಣ; ಮೆಟ್ಟು ಬಳಸಿ, ಚೂಪು ಇಳಿಸಿ.

ಹೆಚ್.ಎಂ. ಅನಂತಪದ್ಮನಾಭ, ಮೈಸೂರು

*ನಿಮ್ಮ 'ಅಂಕಣ'ಕ್ಕೆ ಬರೆದರೆ 'ದುಡ್ಡು ಕೊಡ್ತಾರಾ' ಎಂದು ಇಲ್ಲೊಬ್ಬರು ಕೇಳುತ್ತಿದ್ದಾರೆ. ಏನೆಂದು ಉತ್ತರಿಸಲಿ?*

ಛೆ! ಜ್ಞಾನಧನ, ಹಾಸ್ಯಧನ, ನಗೆಧನಗಳ ಮುಂದೆ ದುಡ್ಡು ಕಾಲ ಕಸಕ್ಕೆ ಸಮ ಎಂದು ಹೇಳಿಬಿಡಿ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ದೃಶ್ಯ ಮಾಧ್ಯಮದಲ್ಲಿ ಜಾಹೀರಾತು ನಿಷೇಧಿಸುವ ಕಾನೂನು ತಂದರೆ ಏನಾಗುತ್ತದೆ?*

ಜಾಹೀರಾತಿನ ಸಮಯದಲ್ಲಿಯೇ ನಡೆಯುವ ಮನೆಕೆಲಸಗಳು ನಿಂತುಹೋಗಿ, ಕೇಟರಿಂಗ್ ಜನಕ್ಕೆ ಶುಕ್ರದೆಸೆ ಬರುತ್ತದೆ.

■ ರಾಮ್